# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)**

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi

ವಿಜಯಪುರ ☎:08352–229051 www.kswu.ac.in **Fax:** 08352 -229057

---

ಸಂಖ್ಯೆ:ಮವಿವಿ/ಶೈಕ್ಷಣಿಕ/ವಿದ್ಯಾವಿಷಯಕ–63/2017–18/ 3109 ದಿನಾಂಕ: 30–01–2018

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ವಿದ್ಯಾವಿಷಯಕ ಪರಿಷತ್‌ನ ಸದಸ್ಯರುಗಳಿಗೆ

ವಿಷಯ: ದಿನಾಂಕ:21–01–2018 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ:21–01–2018 ರಂದು ಮುಂಜಾನೆ 11:30ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್‌ನಲ್ಲಿ ಜರುಗಿದ **"2017–18ನೇ ಶೈಕ್ಷಣಿಕ ಸಾಲಿನ ಮೂರನೆಯ ಹಾಗೂ 63ನೇ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ"** ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ

ಕುಲಸಚಿವರು
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

**ಅಡಕ: ನಡವಳಿಗಳು 01 ರಿಂದ 08**

**ಪ್ರತಿಗಳು:–**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಸರಕಾರದ ಪ್ರಧಾನ ಕಾರ್ಯದರ್ಶಿಗಳು , ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ದ್ವಾರ–2, ಆರನೇ ಮಹಡಿ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

**ದಿನಾಂಕ:21–01–2018 ರಂದು ಬೆಳಿಗ್ಗೆ 11:30ಗಂಟೆಗೆ, ಸಿಂಡಿಕೇಟ್ ಸಭಾಂಗಣ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆ ನಡವಳಿಗಳು**

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 30(1)(ix)ರನ್ವಯ ನಾಮನಿರ್ದೇಶಿತರಾದ ಪ್ರೊ.ಪಿ.ಜಿ.ತಡಸದ, ಡೀನರು ಸಮಾಜವಿಜ್ಞಾನ ನಿಕಾಯ ಅವರನ್ನು ಸ್ವಾಗತಿಸಿ ಎಲ್ಲ ಸದಸ್ಯರನ್ನು ಪರಿಚಯಿಸಿದರು.

**ಸಭೆಗೆ ಹಾಜರಾದ ಸದಸ್ಯರು**

1. ಪ್ರೊ. ಸಬಿಹಾ, ಕುಲಪತಿಗಳು : ಸಭಾಧ್ಯಕ್ಷರು
2. ಡಾ.ದಿಗಂಬರ್ ಕುಲಕರ್ಣಿ, ಪ್ರಾಂಶುಪಾಲರು : ಸದಸ್ಯರು
3. ಶ್ರೀಮತಿ ಮೀನಾಕ್ಷಿ ನೆಲಗಳಿ : ಸದಸ್ಯರು
4. ಶ್ರೀ ವಿಶಾಲಸಿಂಗ್ ನರಗುಂದ : ಸದಸ್ಯರು
5. ಪ್ರೊ.ಸಂಜೀವಕುಮಾರ.ಕೆ.ಎಂ : ಸದಸ್ಯರು
6. ಪ್ರೊ.ಎಸ್.ಬಿ.ಕಾಮಶೆಟ್ಟಿ : ಸದಸ್ಯರು
7. ಪ್ರೊ. ಆರ್ ಸುನಂದಮ್ಮ : ಸದಸ್ಯರು
8. ಪ್ರೊ.ಅಜೀಜ ಮಕಾನ್‌ದಾರ್ : ಸದಸ್ಯರು
9. ಪ್ರೊ. ಎನ್ ಚಂದ್ರಪ್ಪ : ಸದಸ್ಯರು
10. ಪ್ರೊ. ಪಿ.ಜಿ.ತಡಸದ : ಸದಸ್ಯರು
11. ಪ್ರೊ. ಪಿ.ಕಣ್ಣನ್ : ಸದಸ್ಯರು
12. ಡಾ. ಕೆ.ಮೀನಾಕ್ಷಿ : ಸದಸ್ಯರು
13. ಶ್ರೀ.ಎಂ.ಎನ್.ಬೀಳಗಿ : ಸದಸ್ಯರು
14. ಡಾ.ಆರ್.ಜಿ.ಹೆಗಡೆ : ಸದಸ್ಯರು
15. ಡಾ. ಪಲ್ಲವಿ ವಸ್ತ್ರದ : ಸದಸ್ಯರು
16. ಡಾ. ಭಾಗ್ಯ ಡಿ ಪಾಟೀಲ : ಸದಸ್ಯರು
17. ಡಾ. ಶಾಂತಾದೇವಿ ಟಿ : ಸದಸ್ಯರು
18. ಪ್ರೊ. ಓಂಕಾರಗೌಡ ಕಾಕಡೆ : ಸದಸ್ಯರು
19. ಪ್ರೊ.ಎಸ್.ಎ.ಖಾಜಿ : ಸದಸ್ಯರು
20. ಡಾ.ರಾಜಕುಮಾರ ಮಾಲಿಪಾಟೀಲ : ಸದಸ್ಯರು
21. ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು(ಮೌ) : ಸದಸ್ಯರು
22. ಪ್ರೊ. ಎಲ್.ಆರ್.ನಾಯಕ, ಕುಲಸಚಿವರು : ಸದಸ್ಯ ಕಾರ್ಯದರ್ಶಿ

**ಸಭೆಗೆ ಗೈರು ಹಾಜರಾದ ಸದಸ್ಯರು**

1. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
2. ಡಾ.ವಿದ್ಯಾ ಥೊಬ್ಬಿ : ಸದಸ್ಯರು
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
4. ಶ್ರೀ ವಿವೇಕರಾವ್ ವ ಪಾಟೀಲ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು : ಸದಸ್ಯರು
5. ಡಾ.ವಿಲಾಸ ಜಿ ಕುಲಕರ್ಣಿ : ಸದಸ್ಯರು
6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
7. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
8. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
9. ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬೆಂಗಳೂರು : ಸದಸ್ಯರು

ಮುಂದುವರೆದು ಮಾನ್ಯ ಕುಲಪತಿಗಳು ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ಸೂಚಿಸಿದರು.

## ದಿನಾಂಕ: 21–01–2018 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ ನಡವಳಿಗಳು

- ದಿನಾಂಕ:18–11–2017 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

*ನಿರ್ಣಯ: ದೃಢೀಕರಿಸಲಾಯಿತು.*

- ದಿನಾಂಕ: 19–8–2017 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.

*ನಿರ್ಣಯ: ಒಪ್ಪಿಕೊಳ್ಳಲಾಯಿತು.*

# *ವಿದ್ಯಾವಿಷಯಕ ಪರಿಷತ್ ಐಟಂ ಸಂಖ್ಯೆ: 01*

ವಿಷಯ : ಜಮಖಂಡಿಯ ದಾರ್ರೈನ ಮಹಿಳಾ ಶಿಕ್ಷಣ ಮಹಾವಿದ್ಯಾಲಯಕ್ಕೆ ನಿರಕ್ಷೇಪಣಾ ಪತ್ರ ನೀಡುವ ಕುರಿತು.
ಉಲ್ಲೇಖ : ಮಹಾವಿದ್ಯಾಲಯದ ಸಂಖ್ಯೆ : 767/DCEW/JKD/2016-17
ದಿನಾಂಕ: 25-10-2017

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ದಾರ್ರೈನ ಮಹಿಳಾ ಶಿಕ್ಷಣ ಮಹಾವಿದ್ಯಾಲಯ, ಜಮಖಂಡಿ, ಪ್ರತಿ ವರ್ಷ ನಮ್ಮ ಮಹಾವಿದ್ಯಾಲಯ ಆಂತರಿಕ ಅಂಕಗಳು ಮತ್ತು ಒಟ್ಟಾರೆ ಅಂಕಗಳು ಬಹಳ ಕಡಿಮೆ ಕೊಡುವುದರಿಂದ, ಪಾಲಕರು ತಮ್ಮ ಮಕ್ಕಳ ಅಂಕಗಳು ಕಡಿಮೆಯಾಗುತ್ತಿರುವುದರಿಂದ ಹಾಗೂ ಇತರೆ ಸಂಯುಕ್ತ (Co-Education) ಶಿಕ್ಷಣ ಮಹಾವಿದ್ಯಾಲಯದಲ್ಲಿ ಹೆಚ್ಚಿನ ಅಂಕಗಳನ್ನು ನೀಡುತ್ತಿದ್ದರೂ ನೀವು ಅಂಕಗಳು ಕಡಿಮೆ ಯಾಕೆ ಕೊಡುತ್ತಿರೆಂದು ದೂರುಗಳನ್ನು ನೀಡುತ್ತಿದ್ದು, ಇದರಿಂದ ತಮ್ಮ ಮಹಾವಿದ್ಯಾಲಯದಲ್ಲಿ ಪ್ರವೇಶಗಳು ಪ್ರತಿ ವರ್ಷ ಕ್ರಮೇಣ ಕಡಿಮೆಯಾಗುತ್ತಿವೆ ಎಂದು ತಿಳಿಸಿ ತಮ್ಮ ಮಹಾವಿದ್ಯಾಲಯದ ಸಂಯೋಜನೆಯನ್ನು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡಿಕೊಳ್ಳಲು ತಮಗೆ ನಿರಕ್ಷೇಪಣಾ ಪತ್ರ (No Objection Certificate) ನೀಡಬೇಕೆಂದು ವಿನಂತಿಸಿರುತ್ತಾರೆ.

ಸದರಿ ಈ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆ ಹಾಗೂ ಸೂಕ್ತ ಆದೇಶಕ್ಕಾಗಿ ಮಂಡಿಸಿದೆ.

*ನಿರ್ಣಯ:*

1. **ಜಮಖಂಡಿಯ ದಾರ್ರೈನ ಮಹಿಳಾ ಶಿಕ್ಷಣ ಮಹಾವಿದ್ಯಾಲಯ ಸಂಯೋಜನೆಯನ್ನು ಬೇರೆ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಿಕೊಳ್ಳಲು, ನಿರಕ್ಷೇಪಣಾ ಪತ್ರ ನೀಡಲು ತಿರಸ್ಕರಿಸಲಾಯಿತು. ಹಾಗೂ**
2. **ಬಿ.ಎಡ್ ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳಿಗೆ ಸಮನ್ವಯ ಸಮಿತಿ (ಕೋ– ಆರ್ಡಿನೇಶನ್ ಕಮೀಟಿ) ಭೇಟಿ ನೀಡುವುದನ್ನು ರದ್ದುಪಡಿಸಿದ ವಿಷಯವನ್ನು ಎಲ್ಲ ಶಿಕ್ಷಣ ಮಹಾವಿದ್ಯಾಲಯಗಳಿಗೆ ಸೂಚಿಲು ತಿಳಿಸಲಾಯಿತು.**

# *ವಿದ್ಯಾವಿಷಯಕ ಪರಿಷತ್ ಐಟಂ ಸಂಖ್ಯೆ: 02*

**ವಿಷಯ** : ಜೈನ ಮಹಿಳಾ ಮಂಡಳ ಸುಂದರಬಾಯಿ ಅ ಪಾಟೀಲ ಶಿಕ್ಷಣ ಮಹಿಳಾ ಮಹಾವಿದ್ಯಾಲಯ ಬೆಳಗಾವಿ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಸಂಯೋಜನೆಯನ್ನು ಸಹ ಶಿಕ್ಷಣಕ್ಕೆ ವರ್ಗಾವಣೆಗಾಗಿ ಸಮಿತಿಯು ಭೇಟಿಕೊಟ್ಟು ಸಲ್ಲಿಸಿದ ವರದಿಯ ಕುರಿತು.

**ಉಲ್ಲೇಖ** : ಪ್ರೊ. ವಿ.ವಿ.ಮಳಗಿ ಮುಖ್ಯಸ್ಥರು ಶಿಕ್ಷಣ ಅಧ್ಯಯನ ವಿಭಾಗ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ ಇವರ ಪತ್ರ ಸಂಖ್ಯೆ: Awuv/Dept of Edu/ 2017-18/816 ದಿನಾಂಕ : 21-12-2017.

ಜೈನ ಮಹಿಳಾ ಮಂಡಳ ಸುಂದರಬಾಯಿ ಅ ಪಾಟೀಲ ಶಿಕ್ಷಣ ಮಹಿಳಾ ಮಹಾವಿದ್ಯಾಲಯ ಬೆಳಗಾವಿಗೆ ಭೇಟಿ ನೀಡಿ ಸಂಯೋಜನೆಯನ್ನು ಸಹ ಶಿಕ್ಷಣಕ್ಕೆ ವರ್ಗಾವಣೆಗಾಗಿ ಸಮಿತಿಯು ಭೇಟಿಕೊಟ್ಟು ಸಲ್ಲಿಸಿದ ವರದಿಯ ವಿವರ ಈ ಕೆಳಗಿನಂತೆ ಇದೆ.

**: ಸಮಿತಿಯ ಶಿಪಾರಸ್ಸುಗಳು :**

೧) ಬಿ.ಎಡ್ ಮಾಹಾವಿದ್ಯಾಲಯಗಳಿಗೆ ಸಮನ್ವಯ ಸಮಿತಿಯು (Co-ordination Committee) ಎರಡು ಮತ್ತು ನಾಲ್ಕನೇ ಸೆಮಿಸ್ಟರಿಗೆ ಮಾತ್ರ ಭೇಟಿ ನೀಡಲು ಅವಕಾಶ ನೀಡುವುದು.

೨) ಹೊರ ರಾಜ್ಯದ ವಿದ್ಯಾರ್ಥಿನಿಯರ ಪ್ರವೇಶಾತಿ ನಿಯಮದಲ್ಲಿ ಶೇ೧೦% ೫೦/೦೫ ವಿದ್ಯಾರ್ಥಿನಿಯರನ್ನು ಪ್ರವೇಶ ಪಡೆಯುವ ನಿಯಮವನ್ನು ಸಡಿಲಗೊಳಿಸಿ ಮ್ಯಾನೇಜಮೆಂಟ ಕೋಟಾದಲ್ಲಿ ಹೊರ ರಾಜ್ಯದ ವಿದ್ಯಾರ್ಥಿನಿಯರನ್ನು ಪ್ರವೇಶ ಪಡೆಯಲು ಕ್ರಮ ಜರುಗಿಸುವುದು.

೩) ೨೦೧೭–೧೮ ಶೈಕ್ಷಣಿಕ ಸಾಲಿನಲ್ಲಿ ನಮ್ಮ ವಿಶ್ವವಿದ್ಯಾನಿಲಯದಲ್ಲಿಯೇ ಸಂಲಗ್ನತೆಯನ್ನು ಮುಂದುವರಿಸಲು ಸಮಿತಿಯು ಆಡಳಿತ ಮಂಡಳಿಗೆ ತಿಳಿಸಿದ್ದು, ಆಡಳಿತ ಮಂಡಳಿಯ ಕಾರ್ಯದರ್ಶಿ ಹಾಗೂ ಪ್ರಾಚಾರ್ಯರು ಸಹ ಈ ಶೈಕ್ಷಣಿಕ ಸಾಲಿಗೆ ಮುಂದುವರೆಯಲು ಮೌಖಿಕವಾಗಿ ಒಪ್ಪಿಗೆಯನ್ನು ಸೂಚಿಸಿರುತ್ತಾರೆ.

ಸದರಿ ಈ ಮೇಲ್ಕಂಡ ಅಂಶಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆ ಹಾಗೂ ಸೂಕ್ತ ಆದೇಶಕ್ಕಾಗಿ ಮಂಡಿಸಿದೆ.

***ನಿರ್ಣಯ:*** **ಜೈನ ಮಹಿಳಾ ಮಂಡಳ ಸುಂದರಬಾಯಿ ಅ ಪಾಟೀಲ ಶಿಕ್ಷಣ ಮಹಿಳಾ ಮಹಾವಿದ್ಯಾಲಯ ಬೆಳಗಾವಿಯಲ್ಲಿ ಮ್ಯಾನೇಜಮೆಂಟ ಕೋಟಾದಲ್ಲಿ ಖಾಲಿ ಇರುವ ಸೀಟುಗಳಿಗೆ ವಿಶ್ವವಿದ್ಯಾನಿಲಯದ ಪ್ರವೇಶಾತಿ ಸಮಿತಿಯ ಒಪ್ಪಿಗೆ ಪಡೆಯುವದು ಕಡ್ಡಾಯ ಮಾಡಿ ಒಪ್ಪಿಕೊಳ್ಳಲಾಯಿತು.**

## *ವಿದ್ಯಾವಿಷಯಕ ಪರಿಷತ್ ಐಟಂ ಸಂಖ್ಯೆ: 03*

ವಿಷಯ: ಬಿ.ಎಡ್ ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳಿಗೆ ಸಮನ್ವಯ ಸಮಿತಿ (ಕೋ– ಆರ್ಡಿನೇಶನ್ ಕಮೀಟಿ) ಭೇಟಿ ನೀಡುವುದನ್ನು ರದ್ದುಪಡಿಸುವ ಕುರಿತು.

ಸಮನ್ವಯ ಸಮಿತಿಯ ಬಿ.ಎಡ್ ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಆಂತರಿಕ ಅಂಕಗಳ ಸರಾಸರಿಯನ್ನು (ರೇಂಜ್) ನಿಗದಿಪಡಿಸುವಲ್ಲಿ ತೊಂದರೆಯಾಗುತ್ತಿದ್ದು, ಕಾರಣ ಫಲಿತಾಂಶ ಪ್ರಕಟಿಸುವಲ್ಲಿಯೂ ವಿಳಂಬವಾಗುತ್ತಿದೆ. ಇದಲ್ಲದೇ ಹಲವಾರು ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರು ಸಮನ್ವಯ ಸಮಿತಿಯನ್ನು ರದ್ದು ಪಡಿಸುವಂತೆ ಒತ್ತಾಯಿಸುತ್ತಿದ್ದಾರೆ. ಪ್ರಾಂಶುಪಾಲರು, ಗೋದುತಾಯಿ ಶಿಕ್ಷಣ ಮಹಿಳಾ ಮಹಾವಿದ್ಯಾಲಯ, ಕಲಬುರಗಿ ಇವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ ಸಮನ್ವಯ ಸಮಿತಿಯು (ಕೋ–ಆರ್ಡಿನೇಶನ್ ಕಮೀಟಿ) ಭೇಟಿ ನೀಡುವ ವ್ಯವಸ್ಥೆಯನ್ನು ರದ್ದುಪಡಿಸಿದ್ದು ಅದರಂತೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಅನ್ವಯವಾಗುವಂತೆ ಮಾಡಕೊಳ್ಳಬೇಕೆಂದು ವಿನಂತಿಸಿ ಪತ್ರ ನೀಡಿರುತ್ತಾರೆ. ಸದರಿ ವಿಷಯವು ವಿಶ್ವವಿದ್ಯಾನಿಲಯದಲ್ಲಿ ಅನ್ವಯಿಸಿಕೊಳ್ಳುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:*** **ಬಿ.ಎಡ್ ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳಿಗೆ ಸಮನ್ವಯ ಸಮಿತಿ (ಕೋ– ಆರ್ಡಿನೇಶನ್ ಕಮೀಟಿ) ಭೇಟಿ ನೀಡುವುದನ್ನು ರದ್ದುಪಡಿಸಲು ಸಭೆಯು ಬಹುಮತದಿಂದ ಅನುಮೋದಿಸಲಾಯಿತು.**

## *ವಿದ್ಯಾವಿಷಯಕ ಪರಿಷತ್ ಐಟಂ ಸಂಖ್ಯೆ: 04*

ವಿಷಯ: ಶ್ರೀ ಶರಣಬಸವೇಶ್ವರ ಜ್ಞಾನ ವಿಕಾಸ ಪೀಠ ಶಹಾಬಾದ ಇವರ ಕಾಲೇಜಿನ ಸಂಯೋಜನೆ ರದ್ದು ಪಡಿಸುವ ಕುರಿತು.

ಉಲ್ಲೇಖ: ಕಾಲೇಜಿನ ಪತ್ರ ಸಂಖ್ಯೆ:ಎಸ್ಎಸ್‌ಬಿಜೆವಿಪಿ/33/2017 ದಿನಾಂಕ:07–12–2017

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕಾರ್ಯದರ್ಶಿ ಶ್ರೀ ಶರಣಬಸವೇಶ್ವರ ಜ್ಞಾನ ವಿಕಾಸ ಪೀಠದ ಬಿಬಿಎಂ ಮಹಿಳಾ ಮಹಾವಿದ್ಯಾಲಯ ಶಹಾಬಾದ ಇವರು ವಿದ್ಯಾರ್ಥಿನಿಯರ ದಾಖಲಾತಿ ಕೊರತೆಯಿಂದಾಗಿ, 2018–19 ನೇ ಸಾಲಿನ ಮುಂದುವರಿಕೆ ಸಂಲಗ್ನತೆ ಅರ್ಜಿ ಸಲ್ಲಿಸಿರುವದಿಲ್ಲ. ಆದ್ದರಿಂದ ಸದರಿ ಮಹಾವಿದ್ಯಾಲಯವನ್ನು ರದ್ದುಪಡಿಸಲು ಅನುಮತಿ ಕೋರಿ

ಭದ್ರತಾ ಠೇವಣಿ ಹಣವನ್ನು ಮರಳಿಸಲು ವಿನಂತಿಸಿರುತ್ತಾರೆ. ಆದ್ದರಿಂದ ಈ ವಿಷಯವನ್ನು ವಿದ್ಯಾವಿಷಯಕ ಪರಿಷತ್‌ನ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

***ನಿರ್ಣಯ: ಈ ವಿಷಯಕ್ಕೆ ಒಂದು ಸಮಿತಿಯನ್ನು ರಚಿಸಿ ಸದರಿ ಮಹಾವಿದ್ಯಾನಿಲಯಕ್ಕೆ ಕಳುಹಿಸಿ, ವರದಿಯ ಮೇಲೆ ಮುಂದಿನ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.***

## ವಿದ್ಯಾವಿಷಯಕ ಪರಿಷತ್ ಐಟಂ ಸಂಖ್ಯೆ: 05

ವಿಷಯ: ಗೋದುತಾಯಿ ಮಹಿಳಾ ಶಿಕ್ಷಣ ಮಹಾವಿದ್ಯಾಲಯ, ಕಲಬುರ್ಗಿ ಇದಕ್ಕೆ
ನಿರಕ್ಷೇಸಪಣೆ ಪತ್ರ ನೀಡುವ ಕುರಿತು.

ಉಲ್ಲೇಖ:1) ಕಾಲೇಜಿನ ಪತ್ರ ಸಂಖ್ಯೆ: ಜಿಸಿಇಡಿಎನ್/149/2017 ದಿನಾಂಕ:12–12–2017
2)ಕಾಲೇಜಿನ ಪತ್ರ ಸಂಖ್ಯೆ: ಜಿಸಿಇಡಿಎನ್/150/2017 ದಿನಾಂಕ:17–12–2017
3)ಕಛೇರಿ ಪತ್ರ ಸಂಖ್ಯೆ:AMMVV/ACA/Affi-01/2017-18/2789
ದಿನಾಂಕ:26/12/2017

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅಧ್ಯಕ್ಷರು, ಗೋದುತಾಯಿ ಮಹಿಳಾ ಶಿಕ್ಷಣ ಮಹಾವಿದ್ಯಾಲಯ, ಕಲಬುರಗಿ ಇವರು ತಮ್ಮ ಮಹಾವಿದ್ಯಾಲಯವನ್ನು ಶರಣ ಬಸವ ಖಾಸಗಿ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಿಕೊಳ್ಳುವದಕ್ಕಾಗಿ, ಮಹಿಳಾ ವಿಶ್ವವಿದ್ಯಾನಿಲಯದಿಂದ ನಿರಾಕ್ಷೇಪಣೆ ಪತ್ರವನ್ನು ಕೇಳಿರುತ್ತಾರೆ. ಈಗಾಗಲೇ ಉಲ್ಲೇಖಿತ (3) ರ ಪತ್ರದನ್ವಯ ತಾತ್ಕಾಲಿಕ ನಿರಕ್ಷೇಪಣೆ ಪತ್ರವನ್ನು ನೀಡಲಾಗಿದೆ. ಆದ್ದರಿಂದ ಈ ವಿಷಯವನ್ನು ವಿದ್ಯಾವಿಷಯಕ ಪರಿಷತ್‌ನ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

***ನಿರ್ಣಯ: ಸದರಿ ಸಂಸ್ಥೆಯವರಿಂದ ಖಾಸಗಿ ವಿಶ್ವವಿದ್ಯಾನಿಲಯದಲ್ಲಿ ಬಿ.ಎಡ್ ಕಾಲೇಜನ್ನು ಒಳಪಡಿಸುವುದರ ಬಗ್ಗೆ ಸರಕಾರದ ಅನುಮತಿ ದೊರೆತಿರುವ ದಾಖಲಾತಿಗಳನ್ನು ಪಡೆದುಕೊಂಡು ಮುಂದಿನ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.***

## ವಿದ್ಯಾವಿಷಯಕ ಪರಿಷತ್ ಐಟಂ ಸಂಖ್ಯೆ: 06

**ವಿಷಯ:** ಯಾದಗೀರಿಯ ಎಲ್.ಕೆ.ಇ.ಟಿ.ಎಸ್. ಮಹಿಳಾ ಮಹಾವಿದ್ಯಾಲಯದ
ಬಿಸಿಎ ಕೋರ್ಸಿನ ಸಂಯೋಜನೆಯನ್ನು ರದ್ದು ಪಡಿಸುವ ಕುರಿತು.

**ಉಲ್ಲೇಖ:** ಕಾಲೇಜಿನ ಪತ್ರ ದಿನಾಂಕ:28–11–2017

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಪ್ರಾಂಶುಪಾಲರು, ಎಲ್.ಕೆ.ಇ.ಟಿ.ಎಸ್ ಮಹಿಳಾ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಬಿಸಿಎ ಪದವಿ ಮಹಾವಿದ್ಯಾಲಯ, ಯಾದಗೀರ ಇವರು 2016–17 ಮತ್ತು 2017–18 ನೇ ಸಾಲಿಗೆ ಬಿಸಿಎ ಕೋರ್ಸಿಗೆ ಯಾವುದೇ ವಿದ್ಯಾರ್ಥಿನಿಯರು ಪ್ರವೇಶ ಪಡೆದಿರುವದಿಲ್ಲ, ಅನಾವಶ್ಯಕವಾಗಿ ಹಣ ವ್ಯಯವಾಗುತ್ತಿದ್ದು, ಆಡಳಿತ ಮಂಡಳಿ ಸಭೆ ಸೇರಿ ಬಿಸಿಎ ಕೋರ್ಸನ್ನು ರದ್ದುಪಡಿಸುವಂತೆ ಆದೇಶಿಸಿರುವದಿರಿಂದ 2018–19 ನೇ ಸಾಲಿಗೆ ಬಿಸಿಎ ಕೋರ್ಸಿಗೆ ಮುಂದುವರಿಕೆ ಸಂಯೋಜನೆಯ ಶುಲ್ಕವನ್ನು ಸಲ್ಲಿಸಿರುವದಿಲ್ಲವೆಂದು ತಿಳಿಸಿ ತಮ್ಮ ಮಹಾವಿದ್ಯಾಲಯದ ಬಿಸಿಎ ಕೋರ್ಸಿನ ಸಂಯೋಜನೆಯನ್ನು ರದ್ದುಪಡಿಸಲು ಅನುಮತಿ ಕೋರಿರುತ್ತಾರೆ. ಆದ್ದರಿಂದ ಈ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

***ನಿರ್ಣಯ: ಈ ವಿಷಯಕ್ಕೆ ಒಂದು ಸಮಿತಿಯನ್ನು ರಚಿಸಿ ಸದರಿ ಮಹಾವಿದ್ಯಾನಿಲಯಕ್ಕೆ ಕಳುಹಿಸಿ, ವರದಿಯ ಮೇಲೆ ಮುಂದಿನ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.***

## ವಿದ್ಯಾವಿಷಯಕ ಪರಿಷತ್ ಐಟಂ ಸಂಖ್ಯೆ: 07

**ವಿಷಯ:–** ವಿಶ್ವವಿದ್ಯಾಲಯದ ಒಂಬತ್ತನೆಯ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ
ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ನೀಡುವ ಕುರಿತು

**ಉಲ್ಲೇಖ:–**1.ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 69 ರಂತೆ

2.ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಘಟಿಕೋತ್ಸವದ ಪರಿನಿಯಮಾವಳಿ
ಸಂಖ್ಯೆ: 14ರಂತೆ

ವಿಶ್ವವಿದ್ಯಾಲಯದ ಒಂಬತ್ತನೆಯ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಗೌರವ ಡಾಕ್ಟರೇಟ್ ಪದವಿ ನೀಡುವ ಗಣ್ಯವ್ಯಕ್ತಿಗಳ ಪಟ್ಟಿಯನ್ನು ಅವಗಾಹನೆಗಾಗಿ ಮಂಡಿಸಿದೆ.

**ನಿರ್ಣಯ:–ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದ ಒಂಬತ್ತನೆಯ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್‌ಗಾಗಿ ಘನತೆವೆತ್ತ ಕುಲಾಧಿಪತಿಗಳಿಂದ ಡಾ.ಪಂಕಜ ಮಿತ್ತಲ ಹಾಗೂ ಡಾ.ಟಿ.ಎನ್.ಅನುರಾಧಾ, ಇವರುಗಳ ಹೆಸರುಗಳು ಅನುಮೋದನೆಯಾಗಿರುವದನ್ನು ತಿಳಿಸಿದರು.**

**ಇವರುಗಳಿಗೆ ದಿನಾಂಕ:22–01–2018 ರಂದು ಜರುಗಲಿರುವ ಘಟಿಕೋತ್ಸವ ಸಮಾರಂಭದಲ್ಲಿ ಪದವಿ ಪ್ರದಾನ ಮಾಡಲಾಗುವದೆಂದು ಸೂಚಿಸಿದರು.**

## *ವಿದ್ಯಾವಿಷಯಕ ಪರಿಷತ್ ಐಟಂ ಸಂಖ್ಯೆ: 08*

**ವಿಷಯ:** ವಿಶ್ವವಿದ್ಯಾಲಯದ ಒಂಬತ್ತನೆಯ ವಾರ್ಷಿಕ ಘಟಿಕೋತ್ಸವದಲ್ಲಿ ಜುಲೈ 2016ರಿಂದ ಜೂನ್ 2017ರ ಅವಧಿಯಲ್ಲಿ ಸ್ನಾತಕ, ಸ್ನಾತಕೋತ್ತರ ಕೋರ್ಸುಗಳಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿನಿಯರ ಪಟ್ಟಿ & ಸ್ನಾತಕ, ಸ್ನಾತಕೋತ್ತರ ಕೋರ್ಸುಗಳಲ್ಲಿ ವಿಷಯಕ್ಕೆ /ವಿಭಾಗಕ್ಕೆ ಸಮನಾದ ಅಂಕಗಳನ್ನು ಪಡೆದ ವಿದ್ಯಾರ್ಥಿನಿಯರಿಗೆ ನಗದು ಹಣ ನೀಡುವ ಮತ್ತು ಕೆಲವೊಂದು (ಬಿ.ಎಡ್ & ಎಲೆಕ್ಟ್ರಾನಿಕ್ಸ್) ವಿಭಾಗಗಳ ಚಿನ್ನದ ಪದಕಗಳು ವಿತರಣೆಯಾಗದೆ ಇರುವ ಅನುಮೋದಿಸುವ ಕುರಿತು.

**ಉಲ್ಲೇಖ:**1 ಕ್ರ.ಸಂ.ಕರಾಮವಿವಿ/ಆಡಳಿತ/ಘಟಿಕೋತ್ಸವ–09/2017–18/2560,
ದಿನಾಂಕ:15–11–2017ರ ಅಧಿಸೂಚನೆಯಂತೆ

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಒಂಬತ್ತನೆಯ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಎಲ್ಲರಿಗಿಂತ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆಯಾದ ಒಟ್ಟು 56 ಜನ ವಿದ್ಯಾರ್ಥಿನಿಯರಿಗೆ 66 ಚಿನ್ನದ ಪದಕಗಳನ್ನು ನೀಡಬೇಕಾಗಿದೆ. ಮುಂದುವರೆದು ಸಮನಾದ ವಿಷಯಗಳಿಗೆ ಸಮಾನ ಅಂಕಗಳನ್ನು ಪಡೆದ ವಿದ್ಯಾರ್ಥಿನಿಯರಿಗೆ ನಗದು ಹಣ ಮತ್ತು ಪ್ರಮಾಣ ಪತ್ರ ಕೊಡುವ ಕುರಿತು ಮತ್ತು ಚಿನ್ನದ ಪದಕಗಳು ವಿತರಣೆಯಾಗದೆ ಇರುವ ವಿಭಾಗಗಳ ಪಟ್ಟಿಯನ್ನು ತಯಾರಿಸಿ ವಿದ್ಯಾವಿಷಯಕ ಪರಿಷತ್‌ನ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–**

**ವಿಶ್ವವಿದ್ಯಾನಿಲಯದ ಒಂಬತ್ತನೆಯ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಎಲ್ಲರಿಗಿಂತ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆಯಾದ ಒಟ್ಟು 56 ಜನ ವಿದ್ಯಾರ್ಥಿನಿಯರಿಗೆ 66 ಚಿನ್ನದ ಪದಕಗಳನ್ನು ನೀಡಲು ಹಾಗೂ ಸಮನಾದ ವಿಷಯಗಳಿಗೆ ಸಮಾನ ಅಂಕಗಳನ್ನು ಪಡೆದ ವಿದ್ಯಾರ್ಥಿನಿಯರಿಗೆ ನಗದು ಹಣ ಮತ್ತು ಪ್ರಮಾಣ ಪತ್ರ ನೀಡಲು ಅನುಮೋದಿಸಲಾಯಿತು.**

## *ವಿದ್ಯಾವಿಷಯಕ ಪರಿಷತ್ ಐಟಂ ಸಂಖ್ಯೆ: 09*

ವಿಷಯ: ವಿವಿಧ ಪದವಿ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದಿಸುವ ಕುರಿತು.

ಉಲ್ಲೇಖ:1.ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 29ಜಿ(ii) ರಂತೆ
2.ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಘಟಿಕೋತ್ಸವದ ಪರಿನಿಯಮಾವಳಿ
ಸಂಖ್ಯೆ: 9(ii)ರಂತೆ
3.ಕ್ರ.ಸಂ.ಕರಾಮವಿವಿ/ಆಡಳಿತ/ಘಟಿಕೋತ್ಸವ–09/2017–18/2560,
ದಿನಾಂಕ:15–11–2017ರ ಅಧಿಸೂಚನೆಯಂತೆ.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಒಂಬತ್ತನೆಯ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಜುಲೈ 2016 ರಿಂದ ಜೂನ್ 2017ರ ವರೆಗೆ ನಡೆದ ವಿವಿಧ ಸ್ನಾತಕ, ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೋಮಾ, ಪಿಎಚ್.ಡಿ, ಎಂ.ಫಿಲ್ ಮತ್ತು ದೂರ ಶಿಕ್ಷಣ ಪದವಿಗಳಲ್ಲಿ ಉತ್ತೀರ್ಣರಾದ ಮತ್ತು ಅರ್ಹರಾದ ವಿದ್ಯಾರ್ಥಿನಿಯರ ಪಟ್ಟಿಯನ್ನು ವಿದ್ಯಾವಿಷಯಕ ಪರಿಷತ್‌ನ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–**

**ವಿಶ್ವವಿದ್ಯಾಲಯದ ಒಂಬತ್ತನೆಯ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಜುಲೈ 2016 ರಿಂದ ಜೂನ್ 2017ರ ವರೆಗೆ ನಡೆದ ವಿವಿಧ ಸ್ನಾತಕ, ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೋಮಾ, ಪಿಎಚ್.ಡಿ, ಎಂ.ಫಿಲ್ ಮತ್ತು ದೂರಶಿಕ್ಷಣ ಪದವಿಗಳಲ್ಲಿ ಉತ್ತೀರ್ಣರಾದ ಮತ್ತು ಅರ್ಹರಾದ ವಿದ್ಯಾರ್ಥಿನಿಯರ ಪಟ್ಟಿಯನ್ನು ಅನುಮೋದಿಸಲಾಯಿತು.**

## *ವಿದ್ಯಾವಿಷಯಕ ಪರಿಷತ್ ಪುರವಣಿ ಸಂಖ್ಯೆ: 01*

**ವಿಷಯ:** ದಿನಾಂಕ:18–01–2018ರಂದು ಜರುಗಿದ ಡೀನರ ಸಮಿತಿ ಸಭೆಯ ನಡಾವಳಿಗಳ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:18–01–2018ರಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಖಾಲಿ ಉಳಿದಿರುವ ಬೋಧಕ ಹುದ್ದೆಗಳ ನೇಮಕಾತಿ ಹಾಗೂ ಮಾರ್ಗಸೂಚಿಗಳ ಕುರಿತು ಡೀನರ ಸಮಿತಿಯ ಸಭೆಯನ್ನು ಜರುಗಿಸಿದ್ದು, ಸದರಿ ಸಭೆಯ ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:* **ವಿಶ್ವವಿದ್ಯಾನಿಲಯದಲ್ಲಿ ಈ ಕೆಳಕಂಡ ಖಾಲಿ ಉಳಿದಿರುವ ಬೋಧಕ ಹುದ್ದೆಗಳ ನೇಮಕಾತಿ ಮಾಡಿಕೊಳ್ಳಲು ಹಾಗೂ ಮಾರ್ಗಸೂಚಿಗಳನ್ನು** *ಅನುಮೋದಿಸಲಾಯಿತು.* ***ಈಗಾಗಲೇ ಮೂರು ಬಾರಿ 371(ಜೆ) ಅಡಿಯಲ್ಲಿ ಕರೆದಿರುವ(1–ಹಿಂದಿ ಪ್ರಾಧ್ಯಾಪಕರ) ಹುದ್ದೆಯ ಬೇರೆ ವಿಷಯಕ್ಕೆ ಹಾಗೂ ಆ ಇನ್ನೊಂದು ವಿಭಾಗದ ಹುದ್ದೆಯನ್ನು 371(ಜೆ)ಗೆ ವರ್ಗಾಯಿಸಲು ಸಭೆ ಒಪ್ಪಿಗೆ ನೀಡಿತು. ಸಹಾಯಕ ಪ್ರಾಧ್ಯಾಪಕರು ರೂ.2000/–, ಸಹ–ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರು ರೂ.4000/– ಅರ್ಜಿ ಶುಲ್ಕವನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಲು ತೀರ್ಮಾನಿಸಲಾಯಿತು.***

| Sl. No. | Post Graduate Departments | Assistant Professor | Associate Professor | Professor |
|---|---|---|---|---|
| 1. | English | 1-GM(Others) | 2 | -- |
| 2. | Economics | 1-ST (Others) | 1 | 1 |
| 3. | Sociology | -- | 1 | 1 |
| 4. | Women's Studies | -- | 1 | 1 |
| 5. | Computer Science and Application | 1- GM(Others) | - | 1 |
| 6. | Library and Information Science | -- | 1 | 1 |
| 7. | Bio Informatics | 1- GM(Others) | 1 | 1 |
| 8. | Social Work | 1- GM(Others) | 1 | -- |
| 9. | Electronics | -- | 1 | -- |
| 10. | Pharmaceutical Chemistry | -- | 2 | -- |
| 11. | Management Studies | 1- GM(Others) | -- | 1 |
| 12. | Journalism and Mass Communication | 2- ST-1(Others)<br>GM-1(Others) | 1 | 1 |
| 13. | Commerce | 1- GM(Others) | - | - |
| 14. | Hindi | 2-SC-1(Others)<br>GM-1(Others) | 1 | 1 |
| 15. | Food Processing and Nutrition | 3-SC-1(Others)<br>ST-1(Others)<br>GM-1(Others) | 2 | 1 |
| 16. | Education<br>1.M.Ed<br>2. B.Ed | <br>1-GM-1(Others)<br>1-II A-1(Others) | <br>--<br>-- | <br>1<br>-- |
| 17. | Physical Education | | | |

| | | | | |
|---|---|---|---|---|
| | 1. M.PEd<br>2. B.PEd | --<br>2-GM-1(Rural)<br>II A-1(Others) | 1<br>1 | 1<br>-- |
| 18. | Kannada | - | 1 | - |
| 19. | Total | 18 | 18 | 12 |

Reservation for Associate Professor: No of posts:-18,
GM -12 (Women-5, Rural-4, Others-1, PHP-1, EMP-1), SC -2 (Rural-1, Women-1),
II-A - 2 (Rural-1, PHP-1), Cat-I-1 (Others-1), II-B-1 (Others)

Reservation for Professor: No of posts :-11 + 1 post (Reserved for 371J)
GM -7 (Others-2, Women-2, Rural-2, PHP-1), SC -1 (Women-1),

## *ವಿದ್ಯಾವಿಷಯಕ ಪರಿಷತ್ ಪುರವಣಿ ಸಂಖ್ಯೆ: 02*

**ವಿಷಯ:** ದಿನಾಂಕ:21–01–2018 ರಂದು ಜರುಗಿದ ಕರಡು ಪರಿನಿಯಮಾವಳಿ ಸಮಿತಿ ಸಭೆಯ ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಅನುಮೋದಿಸಲಾಯಿತು.**

**ಕುಲಸಚಿವರಾದ ಪ್ರೊ.ಎಲ್.ಆರ್.ನಾಯಕ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ